**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ.ಎಸ್.79/2018**

**ಪಿ.ಡಬ್ಲ್ಯೂ - 1**

**ಪ್ರಮಾಣೀಕರಿಸಿದ ದಿನಾಂಕ:06.01.2025**

**ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದ : -**

ನಾನು ಟಿ.ಸಿ.ಹೆಚ್ ಅನ್ನು ಓದಿದ್ದು, ಶಿಕ್ಷಕಿಯಾಗಿ ನಿವೃತ್ತಿ ಹೊಂದಿರುತ್ತೇನೆ. ನಾನು ಪ್ರಸ್ತುತ ದಾವೆಯನ್ನು ಅನುಭೋಗದ ಹಕ್ಕಿನ ಘೋಷಣೆ ಕುರಿತು ಮತ್ತು ದಾರಿಯ ಬಗ್ಗೆ ಸಲ್ಲಿಸಿರುತ್ತೇನೆ. 1ನೇ ಪ್ರತಿವಾದಿ ನನ್ನ ಅಕ್ಕನ ಸೊಸೆ. ನಾನು 1ನೇ ಅನುಸೂಚಿ ದಾವಾ ಸ್ವತ್ತನ್ನು 45*26 ಅಡಿಗಳಿಗೆ ಖರೀದಿಸಿರುತ್ತೇನೆ. ದಾವಾ ಅನುಸೂಚಿ 'ಎ' ಸ್ವತ್ತಿನ ಚಕ್ಕುಬಂದಿ ಪೂ - ಸೂರ್ಯನಾರಾಯಣಶಾಸ್ತ್ರೀ ರವರ ಸ್ವತ್ತು, ಪ - ಕೃಷ್ಣಮೂರ್ತಿ ರವರ ಸ್ವತ್ತು ಇದ್ದು, ಈಗ ಆಶಾ ರವರಾಗಿರುತ್ತದೆ, ಉ - ಸತೀಶ್ ರವರ ಸ್ವತ್ತು, ದ – 3 1/4 ಅಡಿ ದಾರಿ ಹಾಗೂ ನಂತರ ಉದಯ್ ಕುಮಾರ್ ರವರ ಸ್ವತ್ತು ಇರುತ್ತದೆ. ಪ್ರಸ್ತುತ ಸದರಿ ಪಶ್ಚಿಮಕ್ಕಿರುವ ಸ್ವತ್ತನ್ನು 1ನೇ ಪ್ರತಿವಾದಿ 4ನೇ ಪ್ರತಿವಾದಿಯವರಿಗೆ ಮಾರಿರುತ್ತಾರೆ ಎಂದರೆ ಸರಿ. ಸದರಿ ಪಶ್ಚಿಮ ದಿಕ್ಕಿಗಿರುವ ಸ್ವತ್ತು ಹಾಗೂ ನನ್ನ ಸ್ವತ್ತಿನ ಮಧ್ಯ ಸೆಟ್ ಬ್ಯಾಕ್ ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿ ಪಶ್ಚಿಮ ದಿಕ್ಕಿಗೆ ಸೆಟ್ ಬ್ಯಾಕ್ ಬಿಟ್ಟಿರುವ ಬಗ್ಗೆ ತೋರಿಸಿರುವುದಿಲ್ಲ, ಆದರೆ ವಾಸ್ತವವಾಗಿ ಅಸ್ತಿತ್ವದಲ್ಲಿರುತ್ತದೆ. ವಾದ ಪತ್ರದ ದಾವಾ ಅನುಸೂಚಿ 1ರ ಸ್ವತ್ತಿನ ಚಕ್ಕಬಂದಿಯಲ್ಲಿ ಪಶ್ಚಿಮ ದಿಕ್ಕಿಗೆ ಸದರಿ ಸೆಟ್ ಬ್ಯಾಕ್ ಬಗ್ಗೆ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಪ್ರಮಾಣಪತ್ರದಲ್ಲಿಯೂ ಸಹ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿ. ನಾನು ಕ್ರಯಕ್ಕೆ ಪಡೆಯುವ ಮೊದಲು ಒಟ್ಟು ಸ್ವತ್ತಿನ ವಿಸ್ತೀರ್ಣ 80*26 1/2 ಅಡಿ ಇತ್ತು ಎಂದರೆ ಸರಿ. ನನ್ನ ಮಾರಾಟಗಾರರು ಸದರಿ ವಿಸ್ತೀರ್ಣದ ಸ್ವತ್ತನ್ನು 11.07.1984 ರಂದು ಕ್ರಯಕ್ಕೆ ಪಡೆದಿದ್ದರು ಎಂದರೆ ಸರಿ. ಸದರಿ ಕ್ರಯದ ನಂತರ ಅವರು ಪೂರ್ವ ಹಾಗೂ ಪಶ್ಚಿಮ ದಿಕ್ಕಿನಲ್ಲಿ ಎರಡು ಮನೆಗಳನ್ನು ಕಟ್ಟಿದ್ದರು ಎಂದರೆ ಸರಿ. ಸದರಿ ಪೂರ್ವ ದಿಕ್ಕಿನಲ್ಲಿ ಒಟ್ಟು 45*26 1 /2 ಅಡಿಯಲ್ಲಿ 18*34 ಅಡಿ ಅಷ್ಟು ಮನೆ ಕಟ್ಟಿದ್ದು, ಅದನ್ನು ನಾನು ಖರೀದಿಸಿರುತ್ತೇನೆ. ಸದರಿ ಪಶ್ಚಿಮ ದಿಕ್ಕಿನಲ್ಲಿ 35*26 1/2 ಅಡಿಯಲ್ಲಿ ಮನೆ

ಕಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಪಶ್ಚಿಮ ದಿಕ್ಕಿನಲ್ಲಿರುವ 35*26 1/2 ಅಡಿಯ ಮನೆಯನ್ನು 1ನೇ ಪ್ರತಿವಾದಿಗೆ ನನ್ನ ಮಾರಾಟಗಾರರು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, 36*23 1/4 ಅಡಿಯಲ್ಲಿ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಶ್ಚಿಮ ದಿಕ್ಕಿನಲ್ಲಿರುವ 1ನೇ ಪ್ರತಿವಾದಿಯ ಮನೆಯ ದಕ್ಷಿಣಕ್ಕೆ ದಾರಿ ಬಿಡಲಾಗಿತ್ತು ಎಂದರೆ ಸರಿ. ಸದರಿ ದಾರಿ ದಾವಾ ಅನುಸೂಚಿ 2ನೇ ಸ್ವತ್ತಾಗಿರುತ್ತದೆ. ದಾವಾ ಅನುಸೂಚಿ 2ನೇ ಸ್ವತ್ತು ನನಗೂ, 1 ಹಾಗೂ 4ನೇ ಪ್ರತಿವಾದಿಗಳಿಗೂ ಸೇರಿರುವ ಕಾಮನ್ ಪ್ಯಾಸೇಜ್ ಆಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.1 ರಲ್ಲಿ ತೋರಿಸಿರುವ ದಾವಾ ಅನುಸೂಚಿ 2ನೇ ಸ್ವತ್ತು ಜಿ.ಎಸ್.ಉದಯ್ ಕುಮಾರ್ ಹಾಗೂ ಜಿ.ಎಸ್.ಕೃಷ್ಣಮೂರ್ತಿ ರವರು ಓಡಾಡಲು ಬಿಟ್ಟಿರುವ ದಾರಿ ಎಂದು ಬರೆದಿದ್ದು, ಅದನ್ನ ಸಂಪೂರ್ಣವಾಗಿ ಸುಜಾತ ಆದ ನನಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ಬರೆದಿರುವುದಿಲ್ಲ. ಸದರಿ 2ನೇ ಅನುಸೂಚಿ ಸ್ವತ್ತು ನನ್ನ ಜೊತೆ 1ನೇ ಪ್ರತಿವಾದಿಯೂ ಸಹ ಉಪಯೋಗಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾರಿಯಲ್ಲಿ ಪ್ರತಿವಾದಿಗಳ ಹಾಗೂ ನಮ್ಮ ಮನೆಯ ಪೈಪ್ ಗಳು ಹಾದುಹೋಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 1ನೇ ಸ್ವತ್ತನ್ನು ಮಾತ್ರ ನನಗೆ ಮಾರಾಟ ಮಾಡಿದ್ದು, 2ನೇ ಅನುಸೂಚಿ ಸ್ವತ್ತು ನನ್ನ ಹಾಗೂ ಎಲ್ಲ ಪ್ರತಿವಾದಿಗಳ ಸಾಮಾನ್ಯ ಉಪಯೋಗಕ್ಕೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ಎಲ್ಲರ ಸಾಮನ್ಯ ಉಪಯೋಗಕ್ಕೆ ಇರುವುದರಿಂದ ಪ್ರತಿವಾದಿಗಳು ಅವರ ಮನೆಗಳ ಪೈಪ್ ಗಳ ಸಂಪರ್ಕಗಳನ್ನು ಸದರಿ ಸ್ವತ್ತಿನಿಂದಲೇ ಹಾಯಿಸಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಅನುಸೂಚಿ 1ನೇ ಸ್ವತ್ತಿನ ಪೂರ್ವ ದಿಕ್ಕಿಗೆ ರಸ್ತೆ ಇರುವುದಿಲ್ಲ ಎಂದರೆ ಸರಿ. ನಮ್ಮ ಮನೆಯಿಂದ ದಾವಾ ಅನುಸೂಚಿ 2ನೇ ಸ್ವತ್ತಿನಿಂದಲೇ ಮುಖ್ಯ ರಸ್ತೆಗೆ ಸಂಪರ್ಕ ಹೊಂದಬೇಕಾಗುತ್ತದೆ ಎಂದರೆ ಸರಿ. ದಾವಾ ಅನುಸೂಚಿ 1ನೇ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಸರ್ಕಾರಿ ಟಾರ್ ರಸ್ತೆ ಇರುತ್ತದೆ. ಸದರಿ ರಸ್ತೆಯ ಮೇಲೆ ಡ್ರೈನೆಜ್ ಗಳನ್ನು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪಶ್ಚಿಮ ದಿಕ್ಕಿಗಿರುವ ರಸ್ತೆಯಲ್ಲಿನ ಡ್ರೈನೇಜ್ ಗೆ ನಮ್ಮ ಹಾಗೂ ಪ್ರತಿವಾದಿಗಳ ಶೌಚಾಯಲಯದ ಪೈಪ್ ಗಳಿಗೆ ಸಂಪರ್ಕ ನೀಡಲಾಗಿದೆ

ಎಂದರೆ ಸರಿ. ಸದರಿ ಸಂಪರ್ಕವೂ ದಾವಾ ಅನುಸೂಚಿ 2ನೇ ಸ್ವತ್ತಿನಿಂದ ನೀಡಲಾಗಿದೆ ಎಂದರೆ ಸರಿ.

ನನ್ನ ಹಾಗೂ 1ನೇ ಪ್ರತಿವಾದಿಯ ನಡುವೆ ಮೊದಲಿನಿಂದಲೂ ವೈಶಮ್ಯವಿದ್ದು, ಅವರಿಗೆ ಸಾನಿಟರಿ ಪೈಪ್ ಗಳ ವಿಷಯವಾಗಿ ತೊಂದರೆ ಕೊಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ತೊಂದರೆ ನೀಡಿದ ಕಾರಣ 1ನೇ ಪ್ರತಿವಾದಿ ತಮ್ಮ ಸ್ವತ್ತನ್ನು ಮಾರಾಟ ಮಾಡಲು ಮುಂದಾದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ 4ನೇ ಪ್ರತಿವಾದಿ 1ನೇ ಪ್ರತಿವಾದಿ ಸ್ವತ್ತನ್ನು ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ನನಗೆ ತನ್ನ ಸ್ವತ್ತನ್ನು ಮಾರಾಟ ಮಾಡದೇ 4ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂಬ ದ್ವೇಷದಿಂದ 4ನೇ ಪ್ರತಿವಾದಿಗೂ ಸಹ ತೊಂದರೆ ಕೊಡಲು ಪ್ರಾರಂಭಿಸಿದೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿಗೆ 1ನೇ ಪ್ರತಿವಾದಿ 35*26 1/2 ಅಡಿಗಳ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ 1ನೇ ಪ್ರತಿವಾದಿ ಖರೀದಿಸಿದ್ದ 35*26 1/2 ಅಡಿಗಳ ಸಂಪೂರ್ಣ ಸ್ವತ್ತನ್ನು 4ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದು ಕೇಳಲಾಗಿ ಸಾಕ್ಷಿ ರಸ್ತೆಯನ್ನು ಸೇರಿಸಿ, ಒಟ್ಟು 26 1/2 ಅಡಿಗಳೆಂದು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**